ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

ಸಿ.ಸಿ. ನಂ. **263/2024** ಸಿ. ಡಬ್ಲ್ಯೂ: **11** ಪಿ ಡಬ್ಲ್ಯೂ ಃ **4**

ಸಾಕ್ಷಿಯ ಹೆಸರು ಃ ಪ್ರಹ್ಲಾದ ದೇಸಾಯಿ

ತಂದೆಯ ಹೆಸರು ಃ ರಾಘವೇಂದ್ರರಾವ್

ವಯಸ್ಸು ಃ 62 ವರ್ಷ

ಉದ್ಯೋಗ ಃ ನಿವೃತ್ತ ಹಿರಿಯ ಮೋಟಾರ ವಾಹನ ನಿರೀಕ್ಷಕರು,

ವಾಸಸ್ಥಳ ಃ ಧಾರವಾಡ.

ದಿನಾಂಕಃ 05/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ನಾನು ಜೂನ್ 2013 ರಿಂದ ದಿಃ 30-04-2024 ರ ವರೆಗೆ ಧಾರವಾಡದ ಪ್ರಾದೇಶಿಕ ಕಚೇರಿಯಲ್ಲಿ ಮೋಟಾರ ವಾಹನ ನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ. ದಿಃ 25-10-2023 ರಂದು ಕುಂದಗೋಳ ಪೋ.ಠಾಣೆಯ ಕೋರಿಕೆಯ ಮೇರೆಗೆ ಅದೇ ದಿನ ಸಂಜೆ 04-00 ಗಂಟೆಗೆ ಕುಂದಗೋಳ ಪೋ.ಠಾಣೆ ಆವರಣದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಂಬರ ಕೆಎ-27-ಎಫ್-664 ಗೂಡ್ಸ ವಾಹನ ಸಂಖ್ಯೆ ಟಿಎನ್-88-ಡಿ-9437 ವಾಹನಗಳನ್ನು ಪರಿಶೀಲನೆ ಮಾಡಲಾಗಿ ಕೆಎ-27-ಎಫ್-664 ಬಸ್ಸಗೆ ಈ ಕೆಳಕಂಡ ಜಖಂಗಳು ಕಂಡು ಬಂದವು. 1. ಮುಂಭಾಗದ ಗ್ಲಾಸ ಒಡೆದಿರುತ್ತದೆ, 2. ಮುಂದಿನ ಭಾಗದ ಎರಡು ಹೆಡ್ ಲೈಟ ಹಾಗೂ ಇಂಡಿಕೇಟರಗಳು ಜಖಂಗೊಂಡಿದ್ದವು, 3. ಮುಂಭಾಗದ ಬಂಪರ್ ಜಖಂಗೊಂಡಿದ್ದವು, 4. ಮುಂಭಾಗದ ಬಲಭಾಗದ ಬಾಡಿ ಜಖಂಗೊಂಡಿದ್ದವು, 5. ಮುಂಭಾಗದ ಬಲಗಡೆಯ ಶೋ ಜಖಂಗೊಂಡಿದ್ದವು, 6. ಮುಂಭಾಗದ ಬಲಗಡೆಯ ಚಾಲಕನ ಬಾಗಿಲು ಜಖಂಗೊಂಡಿದ್ದವು, 7. ಮುಂಭಾಗದ ಡ್ಯಾಶ್ ಬೋರ್ಡ ಜಖಂಗೊಂಡಿದ್ದವು, 8. ಮುಂಭಾಗದ ಬಲಗಡೆಯ ರೇರ್ ಮಿರರ್ ಜಖಂಗೊಂಡಿದ್ದವು, 9. ಮುಂಭಾಗದ ಸ್ಟೇರೀಂಗ್ ಯುನಿಟ್ ಜಖಂಗೊಂಡಿದ್ದವು, 10. ಮುಂಭಾಗದ ಎಡಗಡೆಯ ಕಾರ್ನರ್ ಶೋ ಜಖಂಗೊಂಡಿದ್ದವು, 11. ಮುಂಭಾಗದ ಎಡಗಡೆಯ ಬಾಗಿಲು ಜಖಂಗೊಂಡಿದ್ದವು, 12. ಹಿಂದುಗಡೆಯ ಎಡಗಡೆಯ ಬಂಪರ್ ಹಾಗೂ ಬಾಡಿ ಜಖಂಗೊಂಡಿದ್ದವು.

2. ನಾನು ಗೂಡ್ಸ ವಾಹನ ಸಂಖ್ಯೆ ಟಿಎನ್-88-ಡಿ-9437 ಪರೀಶೀಲಿಸಲಾಗಿ ಈ ಕೆಳಕಂಡ ಜಖಂಗಳು ಕಂಡು ಬಂದವು. 1. ಎಡಗಡೆಯ ಹಿಂದಿನ ಟೇಲ್ ಲ್ಯಾಂಪ್ ಗ್ರಿಲ್ ಜಖಂಗೊಂಡಿದ್ದವು, 2. ರೇರ್ ಎಡ ಭಾಗದ ಬಂಪರ್ ಜಖಂಗೊಂಡಿದ್ದವು, 3. ಹಿಂದುಗಡೆಯ ಎಡಗಡೆಯ ಬಾಡಿ ಜಖಂಗೊಂಡಿದ್ದವು, 4. ಹಿಂದುಗಡೆಯ ಎಡಗಡೆಯ ಕಾರ್ನರ್ ಬಾಡಿ ಆ್ಯಂಗಲ್ ಜಖಂಗೊಂಡಿದ್ದವು. ಸದರಿ ವಾಹನಗಳನ್ನು ರಸ್ತೆ ಮೇಲೆ ಪರೀಶೀಲಿಸಿ ಎರಡು ವಾಹನಗಳ ಅಡತಡೆಗಳು ಸುಸ್ಥಿತಿಯಲ್ಲಿದ್ದವು. ಸದರಿ ಅಪಘಾತವು ನನ್ನ ಅಭಿಪ್ರಾಯದಂತೆ ಈ ಪ್ರಕರಣದ ಎರಡು ವಾಹನಗಳ ಯಾವುದೇ ವಾಹನದ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿದ್ದು, ಅದನ್ನು ನಿಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 5 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ</u>

3. ಅಪಘಾತದ ಸ್ಥಳ ಬೆಳ್ಳಿಗಟ್ಟಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ. ಬೆಳ್ಳಿಗಟ್ಟಿ ಗ್ರಾಮ ಕುಂದಗೋಳ ಪೋಲೀಸ್ ಠಾಣೆಯಿಂದ ಅಂದಾಜು 25 ಕೀ.ಮೀ ಇದೆ ಎಂದರೆ ಸರಿ. ಅಡೆತಡೆಗಳನ್ನು ಮತ್ತು ಜಖಂಗಳನ್ನು ಅಪಘಾತದ ಸ್ಥಳದಲ್ಲಿ ವಾಹನಗಳನ್ನು ಪರೀಶೀಲಿಸಿದಾಗ ಪ್ರಾಥಮಿಕ ಸಾಕ್ಷ್ಯ ದೊರಕುತ್ತವೆ ಎಂದರೆ ಸರಿ. 1 ರಿಂದ 10 ಜಖಂಗಳು ಬಸ್ಸನ್ನು ರಸ್ತೆ ಎಡ ಭಾಗದಲ್ಲಿ ಚಲಾಯಿಸುತ್ತಿದ್ದಾಗ ಅಪಘಾತವಾದರೆ ಆಗುವ ಸಾಧ್ಯತೆಯಿದೆ ಎಂದರೆ, ಯಾವುದಾದರೂ ವಾಹನ ಮುಂಭಾಗದಿಂದ ಬಂದು ಡಿಕ್ಕಿ ಮಾಡಿದಾಗ ಆಗುವ ಸಾಧ್ಯತೆಯಿದೆ ಎಂದು ನುಡಿಯುತ್ತಾರೆ. 11 ಮತ್ತು 12 ಜಖಂಗಳು ವಾಹನ ತೆಗ್ಗಿನಲ್ಲಿ ಬಿದ್ದಾಗ ಅಥವಾ ಬೇರೊಂದು ವಾಹನ ಹಿಂದಿನಿಂದ ಬಂದು ಡಿಕ್ಕಿ ಮಾಡಿದಾಗ ಆಗುವ ಸಾಧತೆಯಿದೆ. ನಾನು ಕುಂದಗೋಳ ಪೋಲೀಸ್ ಠಾಣಾ ಆವರಣದಲ್ಲಿ ಬಸ್ಸನ್ನು ತಪಾಸಣೆ ಮಾಡಿಲ್ಲ ಹಾಗೂ ವರದಿಯನ್ನು ನೀಡಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕಚೇರಿಯಲ್ಲಿ ಕುಳಿತು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಿಪಿ. 5 ರ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.